ಕರ್ನಾಟಕ Government ಸರ್ಕಾರ of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

ಡಿಎಸ್ಇಆರ್‌ಟಿ DSERT

Phone - 080 26980100
Fax - 080 26422377

ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ವಿ.ಜೆ/1-5ನೇತ.ಶೈ.ಮಾ.ಸೂ/20/2021-22 ದಿನಾಂಕ:22-10-2021

## ಶೈಕ್ಷಣಿಕ ಮಾರ್ಗಸೂಚಿ

**ವಿಷಯ: 2021-22ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿನ 1 ರಿಂದ 5ನೇ ತರಗತಿಗಳಿಗೆ ಶೈಕ್ಷಣಿಕ ಮಾರ್ಗಸೂಚಿ ಕುರಿತು**

**ಉಲ್ಲೇಖ: 1. ಆಯುಕ್ತರ ಕಛೇರಿಯ ಸುತ್ತೋಲೆ ಸಂಖ್ಯೆ:ಬಿ4(6) ಪ್ರಾಶಿ/ಶಾ.ಕಾ.ಪ್ರ/48/2021-22 ದಿ: 21-10-2021**
**2. ಆಯುಕ್ತರ ಕಛೇರಿಯ ಸುತ್ತೋಲೆ ಸಂಖ್ಯೆ:ಎಡಿಎಂ2(1) ಶೈ.ವಾ.ನಿ-01/2021-22 ದಿ: 10-06-2021**

*-*-*

2021-22 ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 5ನೇ ತರಗತಿಗಳು ದಿನಾಂಕ: 25.10.2021 ರಿಂದ ಭೌತಿಕವಾಗಿ ಪ್ರಾರಂಭವಾಗುತ್ತಿದ್ದು, ಲಭ್ಯವಿರುವ ಸಮಯವನ್ನು ಮಕ್ಕಳ ಕಲಿಕೆಗೆ ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ 1 ರಿಂದ 5 ನೇ ತರಗತಿಗಳ ವಿದ್ಯಾರ್ಥಿಗಳಿಗೆ ಭಾಷಾ ಕಲಿಕೆಯ ಮೂಲ ಸಾಮರ್ಥ್ಯಗಳಾದ ಓದು, ಬರಹ, ಗಣಿತ ವಿಷಯದ ಸಂಖ್ಯಾ ಸಾಮರ್ಥ್ಯ ಹಾಗೂ ಪರಿಸರದ ಮಹತ್ವ ಮತ್ತು ಸಂರಕ್ಷಣೆಗೆ ಹೆಚ್ಚಿನ ಆದ್ಯತೆಯನ್ನು ನೀಡಿ, ವಿದ್ಯಾರ್ಥಿಗಳು ತರಗತಿವಾರು ಗಳಿಸಬೇಕಾದ ಕಲಿಕಾ ಫಲಗಳಿಗೆ ಪೂರಕವಾಗಿ, ಹಿಂದಿನ ತರಗತಿಗಳ ಕಲಿಕಾ ಫಲಗಳನ್ನು ಆಧರಿಸಿ, ಕಲಿಕೆಯನ್ನು ಅನೂಕೂಲಿಸುವ ಗುರುತರ ಜವಾಬ್ದಾರಿ ನಮ್ಮದಾಗಿದೆ.

ಕೋವಿಡ್-19 ರ ಸಂದಿಗ್ಧ ಪರಿಸ್ಥಿತಿಯಲ್ಲಿ ಉಂಟಾದ ಕಲಿಕಾ ಕೊರತೆಯನ್ನು ವಿದ್ಯಾರ್ಥಿಗಳಲ್ಲಿ ಗುರುತಿಸಿ ಅದನ್ನು ಸರಿದೂಗಿಸಿಕೊಂಡು, ತರಗತಿವಾರು ಕಲಿಕಾಫಲಗಳ ಗಳಿಕೆಗೆ ಅನುವು ಮಾಡಿಕೊಡಬೇಕಾಗಿದೆ. ಈ ಕಲಿಕಾ ಕೊರತೆಯು ಎಲ್ಲಾ ವಿಷಯ/ತರಗತಿ/ವಿದ್ಯಾರ್ಥಿಗಳಲ್ಲಿ ಏಕರೂಪವಾಗಿರುವುದಿಲ್ಲ ಎಂಬುದನ್ನು ಕೂಡ ಮನಗಾಣಲಾಗಿದೆ. ಇಲಾಖಾ ವತಿಯಿಂದ ಈಗಾಗಲೇ ಹಮ್ಮಿಕೊಳ್ಳಲಾದ ವಿದ್ಯಾಗಮ, ಸಂವೇದ ಇತ್ಯಾದಿ ಕಾರ್ಯತಂತ್ರಗಳ ಮೂಲಕ ಮಕ್ಕಳ ಕಲಿಕೆಯನ್ನು ಅನೂಕೂಲಿಸುವ ಹಾಗೂ ಕಲಿಕಾ ನಿರಂತರತೆಯನ್ನು ಕಾಯ್ದುಕೊಳ್ಳುವ ಪ್ರಯತ್ನಗಳು ಅವಿರತವಾಗಿ ನಡೆದಿವೆ.

1 ರಿಂದ 5ನೇ ತರಗತಿಗಳ ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ಅನುಕೂಲಿಸುವ ಉದ್ದೇಶದಿಂದ ತರಗತಿವಾರು ಕಲಿಕಾಫಲಗಳ ಆಧಾರಿತವಾಗಿ ಉಲ್ಲೇಖ 1ರ ಮಾರ್ಗಸೂಚಿಯನ್ವಯ ಶಿಕ್ಷಕರಿಗೆ 2 ಹಂತಗಳಲ್ಲಿ ಪೂರಕ ಸಾಹಿತ್ಯವನ್ನು ಸಿದ್ದಪಡಿಸಿ ನೀಡಲಾಗುತ್ತಿದೆ. ಮೊದಲನೇ ಹಂತವು 1 ರಿಂದ 3ನೇ ತರಗತಿಗಳನ್ನೊಳಗೊಂಡಿದ್ದು 2ನೇ ಹಂತದಲ್ಲಿ 4 ಮತ್ತು 5ನೇ ತರಗತಿಗಳು ಒಟ್ಟಾಗಿ ಬರುತ್ತವೆ. ಪ್ರತಿ ವಿಷಯದಲ್ಲಿ ಕಲಿಕಾಫಲಗಳು ಶ್ರೇಣಿಕೃತವಾಗಿ, ಸುರುಳಿಯಾಕಾರದಲ್ಲಿ ಸಂರಚನೆಗೊಂಡಿರುವುದರಿಂದ ಯಾವುದೇ ಒಂದು ನಿರ್ದಿಷ್ಟ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಯು ಆ ತರಗತಿಗೆ ನಿರ್ದಿಷ್ಟಪಡಿಸಲಾದ ಕಲಿಕಾ ಫಲಗಳನ್ನು ಗಳಿಸಲು ಹಿಂದಿನ ತರಗತಿಗಳ ಕಲಿಕಾ ಫಲಗಳ ಸಾಧನೆ ಬಹಳ ಅವಶ್ಯಕವಾಗಿರುತ್ತದೆ. ಮಕ್ಕಳು ಭೌತಿಕವಾಗಿ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗದ ಕಾರಣ ಹಿಂದಿನ ತರಗತಿಗಳಲ್ಲಿ ಗಳಿಸಿದ ಜ್ಞಾನ/ಕೌಶಲಗಳನ್ನು ಪುನರ್ಮನನ ಮಾಡಲು ಸಾಧ್ಯವಾಗದೇ ಕಲಿಕಾ ಅಂತರ ಉಂಟಾಗಿದೆ.

2021-22ನೇ ಸಾಲಿನಲ್ಲಿ ಲಭ್ಯವಿರುವ ಅವಧಿಯಲ್ಲಿ ಈ ಜ್ಞಾನ/ಕೌಶಲಗಳನ್ನು ಮಕ್ಕಳು ಪುನಃ ಗಳಿಸುವಂತೆ ಮಾಡುವ ಅವಶ್ಯಕತೆ ಇದೆ. ಮಕ್ಕಳು ಜ್ಞಾನಾತ್ಮಕ/ಭಾವನಾತ್ಮಕ, ಮನೋಜನ್ಯವಲಯಗಳಲ್ಲಿ ಸಮಗ್ರ ಸಾಧನೆ ಮಾಡಲು ಅವರನ್ನು ಶಾಲೆಗೆ ಭೌತಿಕವಾಗಿ ಕರೆತರುವುದರ ಜೊತೆಗೆ ಮಾನಸಿಕವಾಗಿ ಹಾಗೂ ಸಾಮಾಜಿಕವಾಗಿ ಶಾಲೆ/ತರಗತಿಗೆ ಹೊಂದಿಕೊಳ್ಳುವಂತೆ ಮಾಡಲು 10 ದಿನಗಳ ಪೂರ್ವಭಾವಿ ಸಿದ್ಧತೆಯನ್ನು ಕೈಗೊಳ್ಳುವುದು. ಈ 10 ದಿನಗಳಲ್ಲಿ ಮಕ್ಕಳಿಗೆ ಕಲಿಕೆಯ ಭಾರವನ್ನು ಹೇರದೆ, ಹಾಡು, ಕಥೆ ಹೇಳುವುದು, ಚಿತ್ರಕಲೆ, ಕ್ರಾಫ್ಟ್, ಆಟಗಳು, ಗುಂಪು ಚಟುವಟಿಕೆಗಳು ಇತ್ಯಾದಿಗಳ ಮೂಲಕ ಮಕ್ಕಳನ್ನು ಪರೋಕ್ಷವಾಗಿ ಕಲಿಕೆಯಲ್ಲಿ ತೊಡಗಿಸುವುದು. ಆ ಮೂಲಕ ಮಕ್ಕಳಲ್ಲಿ ಭಾಷೆ/ಗಣಿತ ವಿಷಯದ ಮೂಲ ಪರಿಕಲ್ಪನೆಗಳನ್ನು ಮೂಡಿಸಬೇಕಿದೆ. ಈ ಬಗ್ಗೆ ಪೋಷಕರು ಮತ್ತು ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸಿ ಅವರ ಸಹಕಾರವನ್ನು ಪಡೆಯುವುದು.

ಆದ್ದರಿಂದ ತರಗತಿಯ ಕಲಿಕಾ ಬೋಧನಾ ಪ್ರಕ್ರಿಯೆಯನ್ನು ಸಫಲಗೊಳಿಸುವ ಉದ್ದೇಶದಿಂದ ಹಂತವಾರು/ತರಗತಿವಾರು ಕಲಿಕಾ ಫಲಗಳನ್ನು ಸಾಧಿಸಲು ಪೂರಕವಾದ ಚಟುವಟಿಕೆಗಳು/ಸಾಹಿತ್ಯ/ಸಂಪನ್ಮೂಲ ಆಕರಗಳ ಬಗ್ಗೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ಸಿದ್ಧಪಡಿಸಿ ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾದ ಮಾಸಿಕ ಪರ್ಯಾಯ ಶೈಕ್ಷಣಿಕ ಯೋಜನಾ ಸಾಹಿತ್ಯ, ಅಭ್ಯಾಸ ಪುಸ್ತಕಗಳು, ಪಠ್ಯಪುಸ್ತಕಗಳು, ಅಭ್ಯಾಸ ಹಾಳೆಗಳನ್ನು ಮಕ್ಕಳ ಕಲಿಕೆಗೆ ಪೂರಕವಾಗಿ ಬಳಸಬಹುದಾಗಿದೆ.

ನೀಡಲಾಗಿರುವ ಶೈಕ್ಷಣಿಕ ಮಾರ್ಗಸೂಚಿಯನ್ವಯ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ನಿರ್ವಹಿಸುವುದು. ಇದರ ಜೊತೆಗೆ ಶಿಕ್ಷಕರು ತಮ್ಮ ತರಗತಿಗಳ ಅಗತ್ಯತೆ ಹಾಗೂ ಸ್ಥಳೀಯ ಸನ್ನಿವೇಶಗಳಿಗೆ ಅನುಗುಣವಾಗಿ ಅಗತ್ಯವೆನಿಸಿದಲ್ಲಿ ಸೂಕ್ತ ಮಾರ್ಪಾಡು ಮಾಡಿಕೊಂಡು ನಿರ್ವಹಿಸುವುದು. ಒಟ್ಟಾರೆ, ಯಾವುದೇ ವಿದ್ಯಾರ್ಥಿಯು ತಾನು ಗಳಿಸಬೇಕಾದ ಕಲಿಕಾ ಫಲಗಳಿಂದ ವಂಚಿತವಾಗದಂತೆ ನೋಡಿಕೊಳ್ಳುವುದು ಮತ್ತು ನಿರ್ದಿಷ್ಟ ಕಲಿಕಾಫಲಗಳನ್ನು ಸಾಧಿಸಲು ಮಗುವಿಗೆ ಅನುಕೂಲಿಸುವುದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ.

## 1. ಕಲಿ-ನಲಿ ತರಗತಿಗಳು

ಪ್ರಸಕ್ತ ಭೌತಿಕ ತರಗತಿಗಳ ಪ್ರಾರಂಭದಲ್ಲಿ ಕನ್ನಡ, ಇಂಗ್ಲಿಷ್, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ 1 ರಿಂದ 5 ನೇ ತರಗತಿಗಳಿಗೆ ಪ್ರಮುಖ ಕಲಿಕಾಫಲಗಳನ್ನು ಸಾಧಿಸಲು ಸಿದ್ಧಪಡಿಸಿರುವ ಸಾಹಿತ್ಯವನ್ನು ಬಳಸಿ, ಕೆಳಕಂಡಂತೆ ಮಕ್ಕಳ ಕಲಿಕೆಯನ್ನು ಅನುಕೂಲಿಸಲು ಯೋಜಿಸಿಕೊಳ್ಳುವುದು.

| | |
|---|---|
| ಮೊದಲ 10 ದಿನಗಳು | 1 ರಿಂದ 5ನೇ ತರಗತಿಯ ಮಕ್ಕಳಿಗೆ ಹಾಡು, ಕಥೆ, ಚಿತ್ರಕಲೆ, ಆಟ, ಗುಂಪು ಚಟುವಟಿಕೆಗಳು ಇತ್ಯಾದಿಗಳ ಮೂಲಕ ಶಾಲೆಗೆ ಆಕರ್ಷಿಸುವುದು ಮತ್ತು ಶಾಲಾ ವಾತಾವರಣಕ್ಕೆ ಹೊಂದಿಕೊಳ್ಳುವಂತಹ ಚಟುವಟಿಕೆಗಳನ್ನು ನೀಡುವುದು. |
| 11 ರಿಂದ 50 ದಿನಗಳು | 1, 2 ಮತ್ತು 3ನೇ ತರಗತಿಯ ವಿದ್ಯಾರ್ಥಿಗಳಿಗೆ 1ನೇ ತರಗತಿಯ ಕಲಿಕಾಫಲಗಳನ್ನು ಸಾಧಿಸಲು ಅನುಕೂಲಿಸುವುದು.<br>4 ಮತ್ತು 5ನೇ ತರಗತಿಯ ವಿದ್ಯಾರ್ಥಿಗಳಿಗೆ 3ನೇ ತರಗತಿಯ ಕಲಿಕಾಫಲಗಳನ್ನು ಸಾಧಿಸಲು ಅನುಕೂಲಿಸುವುದು. |
| 51 ರಿಂದ 90 ದಿನಗಳು | 1ನೇ ತರಗತಿಯ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಮುಂದುವರಿದ ಕಲಿಕಾಫಲಗಳನ್ನು ಪುನರ್ಬಲನದೊಂದಿಗೆ ಅನುಕೂಲಿಸುವುದು.<br>2 ಮತ್ತು 3ನೇ ತರಗತಿಯ ವಿದ್ಯಾರ್ಥಿಗಳಿಗೆ 2ನೇ ತರಗತಿಯ ಕಲಿಕಾಫಲಗಳನ್ನು ಸಾಧಿಸಲು ಅನುಕೂಲಿಸುವುದು.<br>4 ಮತ್ತು 5 ನೇ ತರಗತಿಯ ವಿದ್ಯಾರ್ಥಿಗಳಿಗೆ 4ನೇ ತರಗತಿಯ ಕಲಿಕಾಫಲಗಳನ್ನು ಸಾಧಿಸಲು ಅನುಕೂಲಿಸುವುದು |
| 90 ದಿನಗಳ ನಂತರ ಶೈಕ್ಷಣಿಕ ವರ್ಷದ ಅಂತ್ಯದವರೆಗೆ | 1, 2 ಮತ್ತು 3ನೇ ತರಗತಿಯ ಮಕ್ಕಳಿಗೆ ಆಯಾ ತರಗತಿವಾರು ನಿಗದಿಪಡಿಸಲಾದ ಕಲಿಕಾಫಲಗಳನ್ನು ಪುನರ್ಬಲನದೊಂದಿಗೆ ಸಾಧಿಸಲು ಅನುಕೂಲಿಸುವುದು.<br>4 ಮತ್ತು 5ನೇ ತರಗತಿಯ ಮಕ್ಕಳಿಗೆ ಆಯಾ ತರಗತಿವಾರು ನಿಗದಿಪಡಿಸಲಾದ ಕಲಿಕಾಫಲಗಳನ್ನು ಪುನರ್ಬಲನದೊಂದಿಗೆ ಸಾಧಿಸಲು ಅನುಕೂಲಿಸುವುದು. |

## 2. ನಲಿ- ಕಲಿ ತರಗತಿಗಳು

1 ರಿಂದ 3 ನೇ ತರಗತಿಗೆ ಕಲಿಕೆಯನ್ನು ಅನುಕೂಲಿಸಲು ಸಮಗ್ರ ಶಿಕ್ಷಣ-ಕರ್ನಾಟಕ ನಲಿ-ಕಲಿ ಕೋಶದ ವತಿಯಿಂದ ಸಿದ್ಧಪಡಿಸಿದ ಕಲಿಕಾಫಲ/ಮೈಲುಗಲ್ಲು ಆಧಾರಿತ, ಪ್ರಸಕ್ತ ಶೈಕ್ಷಣಿಕ ಸಾಲಿಗಾಗಿ ಮಾರ್ಪಾಡುಗೊಳಿಸಿದ ಚಟುವಟಿಕೆ ಹಂಚಿಕೆ ಪಟ್ಟಿಯನ್ನು ಅವಲೋಕಿಸಿ ಕಲಿಕೆಯನ್ನು ಅನುಕೂಲಿಸುವುದು. ವಿಷಯವಾರು ಮತ್ತು ತರಗತಿವಾರು ಮಾರ್ಪಾಡುಗೊಳಿಸಿದ ನಲಿ-ಕಲಿ ತರಗತಿಗಳ ಕಲಿಕಾ ಏಣಿಯನ್ನು ಮತ್ತು ಗಮನಿಸಬೇಕಾದ ಸೂಚನೆಗಳ ವಿವರವನ್ನು ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್‌ನಲ್ಲಿ (www.dsertkar.nic.in/) ಅಪ್‌ಲೋಡ್ ಮಾಡಲಾಗಿದೆ. ಮೌಲ್ಯಮಾಪನ ಮತ್ತು ದಾಖಲೀಕರಣ ಕುರಿತಂತೆ ದಿನಾಂಕ:31-08-2021 ರ ಸುತ್ತೋಲೆಯ ಅಂಶಗಳ ಜೊತೆಗೆ ಪರಿಷ್ಕೃತ ಮೌಲ್ಯಮಾಪನದ ವಿವರಗಳನ್ನು ಅವಲೋಕಿಸುವುದು.

4 ಮತ್ತು 5 ನೇ ತರಗತಿಗಳ ಕಲಿ-ನಲಿ ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಕಲಿಕೆಯನ್ನು ಅನುಕೂಲಿಸುವುದು.

ಉಲ್ಲೇಖ 2ರ ಸುತ್ತೋಲೆಯ ಮಟಸಂಖ್ಯೆ 8 ರಲ್ಲಿ ತಿಳಿಸಿರುವಂತೆ 1 ರಿಂದ 5 ನೇ ತರಗತಿ ವಿದ್ಯಾರ್ಥಿಗಳ ಕಲಿಕೆ ಕುರಿತು ಎಲ್ಲಾ ಹಂತದ ಉಸ್ತುವಾರಿ ಮತ್ತು ಮೇಲ್ವಿಚಾರಣಾಧಿಕಾರಿಗಳು ಸಕಾಲಕ್ಕೆ ಪ್ರಗತಿ ಪರಿಶೀಲನೆ ಕೈಗೊಂಡು ವರದಿ ಸಲ್ಲಿಸುವುದು.

R. 22/10/2021.
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು (ಆಡಳಿತ) ಹಾಗೂ ಉಪನಿರ್ದೇಶಕರುಗಳು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣ ಅಧಿಕಾರಿಗಳು ಹಾಗೂ ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರುಗಳು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು,

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು-ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಸಾ.ಶಿ.ಇ. ಧಾರವಾಡ ಆಯುಕ್ತಾಲಯ ಮತ್ತು ಕಲಬುರ್ಗಿ ಸಾ.ಶಿ.ಇ. ಕಲಬುರ್ಗಿ ಆಯುಕ್ತಾಲಯರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ
6. ಕಛೇರಿ ಪ್ರತಿ